Tel.No. : 0821-2419208/2419315
Fax: 0821-2419363/2419301

**UNIVERSITY OF MYSORE**

www.uni-mysore.ac.in

**Estd: 1916**

Vishwavidyanilaya Karya Soudha,
Crawford Hall, Mysuru.

**No. AC7/06/2021-22** **Dated: 01-10-2021**



**ADMISSION NOTIFICATION**
**(Call for Entrance Examination)**
**Sub: Admission to Postgraduate Degree Courses for the Academic year 2021-22.**

* * * * *

Applications are invited from eligible candidates for admission to the following Postgraduate Degree Courses under Scheme-A and Scheme-B with different fee structures as detailed at **www.uni-mysore.ac.in** offered at (i) Manasagangotri, Mysore, (ii) Sir M. Visvesvaraya P.G.Centre Tubinakere, Mandya, (iii) Hemagangotri P.G.Center, Hassan, (iv) Dr. B.R. Ambedkar Postgraduate Centre, Chamarajanagar, Constituent Colleges and Government / Private Affiliated / Autonomous Colleges for the academic year **2021-22.**

***Entrance Examination is Compulsory for all Postgraduate Degree courses for all candidates (except candidates from other Universities and Foreign Nationals). Candidates have to apply and appear for entrance examinations separately for each course. However, there shall be a single common entrance examination for the following groups of courses:***

**Group 1 :** Zoology, Applied Zoology, Botany, Biotechnology, MicroBiology, Genetics, Sericulture and Seri Biotechnology, Biochemistry, Molecular Biology.

**Group 2 :**Ambedkar Studies, Buddhist Studies, Cooperative Management, Development Studies, South Indian Studies, Linguistics, International Relations, Philosophy, Comparative Literature and Translation Studies, Folklore, Jainology & Prakrit, West Asian Studies, Peace and Conflict Resolution, Women's Studies, Rural Development, Tribal Development, Master of Lib & Inf. Sc. (M.L.I.Sc).

**Group 3 :** M.Com & M.Com (Financial Services).

**Group 4 :** M.Sc. Chemistry/Organic Chemistry.

**Group 5 :**M.Sc./ M.A. Anthropology.

For all the remaining courses (not included in the above groups), candidates have to appear separately for each Examination. Candidates who seek admission for M.B.A., M.C.A., M.Tech. (CCT) and M.Tech. (CST) are advised to contact Karnataka Examinations Authority (KEA). For B.Arch/M.Arch/B.Plan. Entrance Examination through NATA **(National Aptitude Test for Architecture) – Council of Architecture, New Delhi.**

**For admission to any PG degree course, candidates have to get qualified in the respective entrance examination Conducted by the University of Mysore, by securing a minimum 08 marks in case of SC / ST /Cat-I candidates ; 09 marks in case of OBC and 10 marks in case of other candidates out of 50 marks.**

***Foreign nationals shall visit (http://internationalcenter.uni-mysore.ac.in) for procedure of submission of application and admission.**

## GENERAL INSTRUCTIONS

1. Candidates who have appeared for the final semester examination of the qualifying degree can also appear for entrance examinations without waiting for their results. Original marks cards shall be submitted at the time of admissions (if they are selected).
2. Filing an application for entrance examination and later for admission shall be **ONLINE ONLY**. Online portal will be opened from **04-10-2021** Last date for filing the application for entrance examination is **16-10-2021**.
3. The payment of fees shall be **ONLINE only**.
4. Candidates (irrespective of category) have to pay separately **Rs. 600/-** for entrance examination for each course and **Rs. 800/-** for Group Subjects.
5. Admission shall be made on the basis of the merit list prepared by taking into consideration 50% of the aggregate marks obtained in the relevant subjects in the qualifying degree examination and 50% of marks obtained in the entrance examination.
6. Details on eligibility criteria, fee structure and admission to certificate / diploma / PG diploma courses and also procedure to apply for admission after entrance examination are available at **www.uni-mysore.ac.in**
7. Candidates who will be admitted to PG Diploma / Diploma / Certificate courses etc. are not eligible for any scholarships / hostelships and re-imbursements Fee, if any.
8. Applications without valid certificates and incomplete information will not be considered, and are liable to be rejected.
9. Admissions will be made as per the Government Orders issued from time to time relating to reservation of seats. Allotment of seats to Other Universities (OU) candidates is as per the existing rules of the Government of Karnataka.

**Sd/-**
**Registrar**

ಫ್ಯಾಕ್ಸ್: 0821-2419208/2419315
ದೂರವಾಣಿ–0821–2419208/2419450
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

**(ಶತಮಾನೋತ್ಸವ ವರ್ಷ 2015–16)**

**ಸ್ಥಾಪನೆ: 1916**

**ವಿಶ್ವವಿದ್ಯಾನಿಲಯ ಕಾರ್ಯಸೌಧ,**
ಕ್ರಾಫರ್ಡ್ ಭವನ, ಮೈಸೂರು–570005

**ಸಂಖ್ಯೆ: ಎಸಿ7/06/2021-22** **ದಿನಾಂಕ:: 01-10-2021**



## ಪ್ರವೇಶಾತಿ ಅಧಿಸೂಚನೆ

**(ಪ್ರವೇಶ ಪರೀಕ್ಷೆಗಾಗಿ ಆಹ್ವಾನ)**

ವಿಷಯ: 2021–22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿ ಬಗೆಗೆ.

******

2021–22ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳು/ ಸ್ನಾತಕೋತ್ತರ ಕೇಂದ್ರಗಳು/ಘಟಕ ಕಾಲೇಜುಗಳು/ಸಂಯೋಜಿತ ಕಾಲೇಜುಗಳಲ್ಲಿ ನಡೆಸುವ ಈ ಕೆಳಗಿನ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಪ್ರವೇಶಾತಿ ಪರೀಕ್ಷೆಯು ಎಲ್ಲಾ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ (ಇತರೆ ವಿಶ್ವವಿದ್ಯಾನಿಲಯ ಹಾಗೂ ವಿದೇಶಿ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಕಡ್ಡಾಯವಾಗಿರುತ್ತದೆ. ಪ್ರತಿ ಕೋರ್ಸಿಗೂ ಅಭ್ಯರ್ಥಿಯು ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಿ ಪರೀಕ್ಷೆಗೆ ಹಾಜರಾಗಬೇಕು. ಈ ಕೆಳಗಿನ ಕೋರ್ಸುಗಳ ಗುಂಪುಗಳಿಗೆ ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆಯಿರುತ್ತದೆ.**

**ಗುಂಪು 1:** ಪ್ರಾಣಿಶಾಸ್ತ್ರ, ಅನ್ವಯಿಕ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಜೈವಿಕ ತಂತ್ರಜ್ಞಾನ, ಸೂಕ್ಷ್ಮಜೀವಶಾಸ್ತ್ರ, ತಳಿಶಾಸ್ತ್ರ, ರೇಷ್ಮೆಕೃಷಿ ಮತ್ತು ರೇಷ್ಮೆ ಜೈವಿಕ ತಂತ್ರಜ್ಞಾನ, ಜೀವರಸಾಯನಶಾಸ್ತ್ರ, ಅಣು ಜೀವಶಾಸ್ತ್ರ.

**ಗುಂಪು 2:** ಅಂಬೇಡ್ಕರ್ ಅಧ್ಯಯನ, ಬುದ್ಧ ಅಧ್ಯಯನ, ಸಹಕಾರ ನಿರ್ವಹಣೆ, ಅಭಿವೃದ್ಧಿ ಅಧ್ಯಯನ, ದಕ್ಷಿಣ ಭಾರತೀಯ ಅಧ್ಯಯನ, ಭಾಷಾವಿಜ್ಞಾನ, ಅಂತರಾಷ್ಟ್ರೀಯ ಸಂಬಂಧಗಳು, ತತ್ವ ಶಾಸ್ತ್ರ, ತೌಲನಿಕ ಸಾಹಿತ್ಯ ಮತ್ತು ಭಾಷಾಂತರ ಅಧ್ಯಯನ, ಜಾನಪದ, ಜೈನಶಾಸ್ತ್ರ ಮತ್ತು ಪ್ರಾಕೃತ, ಪಾಶ್ಚಿಮಾತ್ಯ ಏಷಿಯಾದ ಅಧ್ಯಯನ, ಶಾಂತಿ ಮತ್ತು ಘರ್ಷಣೆಯ ನಿರ್ಣಯ, ಮಹಿಳಾ ಅಧ್ಯಯನ, ಗ್ರಾಮೀಣ ಅಭಿವೃದ್ಧಿ, ಬುಡಕಟ್ಟು ಅಭಿವೃದ್ಧಿ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, (M.L.I.Sc)

**ಗುಂಪು 3:** ಎಂ.ಕಾಂ. ಎಂ.ಕಾಂ(ಹಣಕಾಸು ಸೇವೆ)

**ಗುಂಪು 4:** ಎಂ.ಎಸ್ಸಿ, ರಸಾಯನಶಾಸ್ತ್ರ/ಸಾವಯವ ರಸಾಯನಶಾಸ್ತ್ರ

**ಗುಂಪು 5:** ಎಂ.ಎಸ್ಸಿ, /ಎಂ.ಎ. ಮಾನವಶಾಸ್ತ್ರ

**ಮೇಲಿನ ಗುಂಪಿನಲ್ಲಿ ಸೇರ್ಪಡೆಯಾಗದಿರುವ ಕೋರ್ಸುಗಳಿಗೆ ವಿದ್ಯಾರ್ಥಿಗಳು ಪ್ರತ್ಯೇಕ ಪ್ರವೇಶ ಪರೀಕ್ಷೆಗಳಿಗೆ ಹಾಜರಾಗಬೇಕು.** ಎಂ.ಬಿ.ಎ., ಎಂ.ಸಿ.ಎ ಎಂ.ಟೆಕ್.(CCT) ಮತ್ತು ಎಂ.ಟೆಕ್.(CST) ಕೋರ್ಸುಗಳಿಗೆ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಸಂಪರ್ಕಿಸಲು ಸೂಚಿಸಿದೆ. B.Arch, B.Plan ಹಾಗೂ M.Arch. ಕೋರ್ಸುಗಳಿಗೆ **NATA (National Aptitude Test for Architecture)-Council of Architecture, New Delhi,** ಮೂಲಕ ಪ್ರವೇಶ ಪರೀಕ್ಷೆ ತೆಗೆದುಕೊಳ್ಳುವುದು.

ಯಾವುದೇ ಪಿ.ಜಿ. ಪದವಿ ಕೋರ್ಸುಗಳ ಪ್ರವೇಶಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ನಡೆಸುವ ಸಂಬಂಧಿಸಿದ ಪ್ರವೇಶ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು 50 ಅಂಕಗಳಿಗೆ ಕನಿಷ್ಠ 10 ಅಂಕಗಳು (ಎಸ್‌ಸಿ/ಎಸ್‌ಟಿ/ವರ್ಗ–1 ಆಗಿದ್ದಲ್ಲಿ ಕನಿಷ್ಠ 08 ಅಂಕಗಳು; ಒಬಿಸಿ ಆಗಿದ್ದಲ್ಲಿ ಕನಿಷ್ಠ 09 ಅಂಕಗಳು) ಪಡೆದವರು ಮಾತ್ರ ಪ್ರವೇಶಾತಿಗೆ ಅರ್ಹರಾಗಿರುತ್ತಾರೆ.

- ವಿದೇಶಿ ವಿದ್ಯಾರ್ಥಿಗಳು ಅರ್ಜಿಯ ಸಲ್ಲಿಕೆ ಮತ್ತು ಪ್ರವೇಶದ ವಿವರಣೆಗಳಿಗೆ ವೆಬ್‌ಸೈಟ್ (http://internationalcenter.uni-mysore.ac.in) ನ್ನು ನೋಡಬೇಕು.

–1–

–2–

## ಸಾಮಾನ್ಯ ಸೂಚನೆಗಳು

1. ಅರ್ಹತಾ ಪದವಿಯ ಅಂತಿಮ ಸೆಮಿಸ್ಟರ್ ಪರೀಕ್ಷೆಯನ್ನು ತೆಗೆದುಕೊಂಡಿರುವ ವಿದ್ಯಾರ್ಥಿಗಳು ಸಹ ಪ್ರವೇಶ ಪರೀಕ್ಷೆಗೆ ಹಾಜರಾಗಬಹುದು.
2. ಪ್ರವೇಶ ಪರೀಕ್ಷೆಗಾಗಿ ಅರ್ಜಿಯನ್ನು ಭರ್ತಿ ಮಾಡುವುದು ಮತ್ತು ನಂತರದ ಪ್ರವೇಶಾತಿ ಪ್ರಕ್ರಿಯೆಯು ಆನ್‌ಲೈನ್ (ONLINE) ಮುಖಾಂತರ ಮಾತ್ರವೇ ನಡೆಯುತ್ತದೆ. ಆನ್‌ಲೈನ್ ಪೋರ್ಟಲ್ (ONLINE PORTAL) **04–10–2021** ರಿಂದ ಪ್ರಾರಂಭವಾಗುತ್ತದೆ ಮತ್ತು ಪ್ರವೇಶ ಪರೀಕ್ಷೆಗೆ ಅರ್ಜಿಯನ್ನು ಭರ್ತಿ ಮಾಡಲು **16–10–2021** ಕೊನೆಯ ದಿನಾಂಕವಾಗಿರುತ್ತದೆ.
3. ಶುಲ್ಕ ಸಲ್ಲಿಕೆ ಆನ್‌ಲೈನ್ ಪೇಮೆಂಟ್ ಮೂಲಕ ಮಾತ್ರ.
4. ಅಭ್ಯರ್ಥಿಗಳು (ಎಲ್ಲ ವರ್ಗದವರು) ಪ್ರತಿ ಕೋರ್ಸಿನ ಪ್ರವೇಶ ಪರೀಕ್ಷೆಗಾಗಿ **ರೂ. 600** ಮತ್ತು **ಗುಂಪಿಗೆ ಸೇರಿದ ಕೋರ್ಸಿನ ಪ್ರವೇಶ ಪರೀಕ್ಷೆಗಾಗಿ ರೂ. 800/– ಪಾವತಿಸತಕ್ಕದ್ದು.**
5. ಅರ್ಹ ಪದವಿ ಪರೀಕ್ಷೆಯಲ್ಲಿ ಸಂಬಂಧಿಸಿದ ವಿಷಯದಲ್ಲಿ ಪಡೆದ ಒಟ್ಟು ಅಂಕದಲ್ಲಿ ಶೇ 50% ಅಂಕವನ್ನು ಮತ್ತು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇ 50% ರಷ್ಟನ್ನು ಪರಿಗಣಿಸಿ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ ಅದರ ಆಧಾರದಲ್ಲಿ ಪ್ರವೇಶಾತಿ ಮಾಡಲಾಗುತ್ತದೆ.
6. ಅರ್ಹತಾ ಮಾನದಂಡದ ವಿವರಗಳು, ಸರ್ಟಿಫಿಕೆಟ್/ಡಿಪ್ಲೊಮಾ/ಪಿಜಿ ಡಿಪ್ಲೊಮಾ/ ಕೋರ್ಸುಗಳ ಪ್ರವೇಶ ಮತ್ತು ಶುಲ್ಕ ಸ್ವರೂಪ ಹಾಗೂ ಪ್ರವೇಶ ಪರೀಕ್ಷೆಯ ನಂತರ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸುವ ಕ್ರಮಗಳು ಇತ್ಯಾದಿ ವಿವರಗಳು ವಿ.ವಿ.ಯ www.uni-mysore.ac.in ವೆಬ್‌ಸೈಟ್ ವಿಳಾಸದಲ್ಲಿ ಲಭ್ಯವಿರುತ್ತವೆ.
7. ಪಿ.ಜಿ ಡಿಪ್ಲೊಮಾ/ಡಿಪ್ಲೊಮಾ/ಸರ್ಟಿಫಿಕೆಟ್ ಕೋರ್ಸುಗಳಿಗೆ ಪ್ರವೇಶ ಹೊಂದಿದ ಅಭ್ಯರ್ಥಿಗಳು ಯಾವುದೇ ವಿದ್ಯಾರ್ಥಿವೇತನ/ ವಿದ್ಯಾರ್ಥಿನಿಲಯ ಶುಲ್ಕ ಮತ್ತು ಯಾವುದೇ ಶುಲ್ಕ ಮರುಪಾವತಿಗೆ ಅರ್ಹರಾಗಿರುವುದಿಲ್ಲ.
8. ಸೂಕ್ತವಾದ ಪ್ರಮಾಣ ಪತ್ರಗಳು ಇಲ್ಲದ ಮತ್ತು ಅವಶ್ಯಕ ಮಾಹಿತಿ ಇಲ್ಲದ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಮತ್ತು ಅವು ಕಾನೂನಾತ್ಮಕವಾಗಿ ತಿರಸ್ಕೃತವಾಗುತ್ತವೆ.
9. ಪ್ರವೇಶಾತಿಯನ್ನು ಮೀಸಲು ಸೀಟುಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಬರುವ ಸರ್ಕಾರಿ ಆದೇಶಗಳ ಅನುಸಾರ ನಡೆಸಲಾಗುತ್ತದೆ. ಇತರ ವಿಶ್ವವಿದ್ಯಾನಿಲಯಗಳ ಅಭ್ಯರ್ಥಿಗಳಿಗೆ (OU) ಕರ್ನಾಟಕ ಸರ್ಕಾರದ ಚಾಲ್ತಿಯಲ್ಲಿರುವ ನಿಯಮಾನುಸಾರ ಪ್ರವೇಶ ನೀಡಲಾಗುತ್ತದೆ.

**Sd/-**
**ಕುಲಸಚಿವ**